International Journal of Kannada Research 2023; 9(3): 38-44




International Journal of Kannada Research
www.kannadajournal.com

**ISSN: 2454–5813**
IJKR 2023; 9(3): 38-44
© 2023 IJKR
www.kannadajournal.com
Received: 28-06-2023
Accepted: 30-07-2023

**ಎಚ್.ಜೆ. ಚಂದ್ರು**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ, ಕರ್ನಾಟಕ, ಭಾರತ

**Corresponding Author:**
**ಎಚ್.ಜೆ. ಚಂದ್ರು**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ, ಕರ್ನಾಟಕ, ಭಾರತ

# ಬಾ ಗಿಳಿಯೇ ಪಂಚವರ್ಣದ ಗಿಳಿಯೇ ಕಥೆಯಲ್ಲಿ - ಲೈಂಗಿಕ ರಾಜಕಾರಣ

**ಎಚ್.ಜೆ. ಚಂದ್ರು**

**DOI:** https://doi.org/10.22271/24545813.2023.v9.i3a.860

**ಪೀಠಿಕೆ**

ಕೇಶವರೆಡ್ಡಿ ಹಂದ್ರಾಳರ ಪ್ರಮುಖ ಕಥೆಗಳಲ್ಲಿ 'ಬಾ ಗಿಳಿಯೇ ಪಂಚವರ್ಣದ ಗಿಳಿಯೇ' ಕಥೆಗೆ ವಿಶಿಷ್ಟ ಸ್ಥಾನವಿದೆ. ಎರಡು ಸಂಸ್ಕೃತಿಗಳ ತಾಕಲಾಟಗಳಲ್ಲಿ ಮುಗ್ಧ ಯುವತಿಯೊಬ್ಬಳು ಬದುಕನ್ನೇ ಕಳೆದುಕೊಳ್ಳುವ ದಾರುಣತೆಯೇ ಈ ಕಥೆಯ ವಸ್ತು. ಕಥೆ ಹಿನ್ನೋಟ ಕ್ರಮದಲ್ಲಿ ಪತ್ರ ಬರೆಯುತ್ತಿರುವ ತಂತ್ರದ ಹಿನ್ನೆಲೆಯಲ್ಲಿ ರಚನೆಗೊಂಡಿದೆ. ಜಗತ್ತಿನ ಬಹುತೇಕ ನಾಗರಿಕರಿಗೆ ಪಾಶ್ಚಾತ್ಯ ದೇಶಗಳಲ್ಲಿನ ವಾಸ್ತವ್ಯ ಹಾಗೂ ಅಲ್ಲಿ ಪಡೆಯುವ ಶಿಕ್ಷಣ ಶ್ರೇಷ್ಠ ಎಂಬ ವ್ಯಸನ ಕಾಣಿಸಿಕೊಳ್ಳುತ್ತಿದೆ. ಅಂತೆಯೇ ಭಾರತದ ಕನ್ನಡನಾಡಿನ ಪೋಷಕರ ಒತ್ತಾಯದ ಮೇರೆಗೆ; ಇಂಗ್ಲೆಂಡನಲ್ಲಿ ವೈದ್ಯ ಶಿಕ್ಷಣ ಪಡೆಯುವ ವಿದ್ಯಾರ್ಥಿ ಒಬ್ಬಳ ಅಸಹಾಯಕ ಸ್ಥಿತಿ ಇಲ್ಲಿದೆ.

ಮಾನವ ಸಮಾಜ ಜೀವಿ ಹಾಗೆಯೇ ಸಮುದಾಯದೊಳಗಿನ ಸಂಗಜೀವಿ. ಕೌಟುಂಬಿಕವಾದ ಪ್ರೀತಿ ವಿಶ್ವಾಸ ಹಾಗೂ ಸಾಮಾಜಿಕವಾದ ಭದ್ರತೆ ಮನುಷ್ಯನ ನಿಶ್ಚಿತವಾದ ಜೀವನಕ್ಕೆ ಪ್ರೇರಕ. ಇದರೊಟ್ಟಿಗೆ ಸಹಮಾನವರ ಜತೆಗಿನ ಆತ್ಮೀಯ ಒಡನಾಟ, ಮಾನವೀಯ, ನೈತಿಕ ಶಿಕ್ಷಣ ಸತ್ಪ್ರಜೆಗಳಿಗೆ ಪ್ರೇರಕವಾಗಿರುತ್ತದೆ. ಅನುಕರಣೆ ಜಗದ ನಿಯಮ, ಏನನ್ನು ಅನುಕರಿಸಬೇಕೆಂಬ ಮಾರ್ಗದರ್ಶನ ಅತ್ಯಾವಶ್ಯಕ. ಇಂದು ಕುಟುಂಬವಾಗಲಿ - ಸಮಾಜವಾಗಲಿ ಸಂಪತ್ತಿನ ಸಂಗ್ರಹಣೆಗೆ ಮಹತ್ವ ನೀಡುವಲ್ಲಿ ನಿರತವಾಗಿರುವಷ್ಟು ಮೌಲ್ಯಯುತ ಜೀವನದ ಬಗ್ಗೆ ಗಮನಹರಿಸುತ್ತಿಲ್ಲ. ಸಂಪತ್ತಿನ ಸಂಗ್ರಹ ಸೌಲಭ್ಯಗಳನ್ನು ಹೆಚ್ಚಿಸುತ್ತದೆಯೇ ಹೊರತು, ನೆಮ್ಮದಿಯ ಜೀವನದ ದಾರಿಗಳನ್ನು ಸೃಷ್ಟಿಸಲಾರದು. ಆದರೆ ಇಂದು ಇಡೀ ಜಗತ್ತು ಕೊಳ್ಳು ಬಾಕ ಸಂಸ್ಕೃತಿಯ ಹಿಂದೆ ಓಡುತ್ತ, ಮೌಲಿಕ ಜೀವನದ ಮಾದರಿಗಳನ್ನು ನಿರ್ಲಕ್ಷಿಸುತ್ತಿದೆ. ಅದರ ಪ್ರತಿಫಲವೆಂಬಂತೆ, ಭವಿಷ್ಯದ ಆಸ್ತಿಗಳಾಗಿ ಬದಲಾಗಬೇಕಾಗಿದ್ದ ಯುವಜನತೆ ಇಂದು ದಾರಿ ತಪ್ಪುತ್ತಿದ್ದಾರೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಂಕಗಳಿಸುವ ಹಾಗೂ ಕೌಶಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತ; ನೈತಿಕ ಶಿಕ್ಷಣವನ್ನು ಕಡೆಗಣಿಸಲಾಗುತ್ತಿದೆ. ಅದರ ಪ್ರತಿಫಲವೆಂಬಂತೆ ವೈದ್ಯ ವಿದ್ಯಾರ್ಥಿಗಳು ದೇಶದ ನಾಗರಿಕರ ಆರೋಗ್ಯ ಕಾಪಾಡುವ ಬದಲು ಸ್ವೇಚ್ಛಾಚಾರದ ಜೀವನದತ್ತ ಆಕರ್ಷಿತರಾಗುತ್ತಿದ್ದಾರೆ. ಪ್ರಸ್ತುತ ಕಥೆ ಎರಡು ತಲೆಮಾರಿನ ಜನಾಂಗದ ಅಧಃಪತನವನ್ನು ತೆರೆದಿಡುತ್ತದೆ. ಕೆಟ್ಟ ವಾತಾವರಣ ಕೆಟ್ಟ ಕೆಲಸಗಳ ಪ್ರೇರಕ ಶಕ್ತಿಯಾಗುತ್ತದೆ.

ಇಲ್ಲಿನ ವೈದ್ಯ ವಿದ್ಯಾರ್ಥಿಯೊಬ್ಬಳ ಬಾಲ್ಯ ಜೀವನದ ಕೆಟ್ಟ ಘಟನೆಗಳು ಯೌವ್ವನದಲ್ಲಿ ಆಕೆ ತಪ್ಪು ಮಾಡಲು ಕಾರಣವಾಗುತ್ತವೆ. ತಾನು ಮುಖಾಮುಖಿಯಾಗಿ, ಇಲ್ಲವೆ ದೂರವಾಣಿಯಲ್ಲಿ ಹೇಳಿಕೊಳ್ಳಲಾಗದ ಸಂಗತಿಗಳನ್ನು ತಾಯಿಗೆ ಪತ್ರ ಬರೆಯುವ ಮೂಲಕ ಅನಾವರಣ ಮಾಡುತ್ತಾಳೆ.

ಅತ್ಯಂತ ಬುದ್ಧಿವಂತನಾದ ಮಾನವ ತನ್ನ ಸಮುದಾಯದ ಈಗಿನ ಸ್ಥಿತಿಯನ್ನು ಉತ್ತಮ ಪಡಿಸಲಾರದವನಾದರೆ ಆತನ ಹುಟ್ಟು, ಬದುಕು ಸಾರ್ಥಕವಾಗುವುದಿಲ್ಲ. ನಾವು ಸಮಾಜದಲ್ಲಿ ಧೈರ್ಯವಾಗಿ ಹೇಳಿಕೊಳ್ಳುವ ಕೆಲಸಗಳನ್ನು ಮಾತ್ರ ಮಾಡಬೇಕೆ ಹೊರತು, ಕೆಟ್ಟದ್ದನ್ನಲ್ಲ. ಇದು ಆಕೆ, ತನ್ನ ಇಪ್ಪತ್ತು ವರ್ಷದ ಜೀವನದಲ್ಲಿ ಬರೆದ ಮೊದಲ ಪತ್ರ. ಅದು ಏಕಕಾಲಕ್ಕೆ ವೈದ್ಯ ವಿದ್ಯಾರ್ಥಿಯ ದುರಂತ ಕಥೆಯು ಹೌದು; ಅಂತೆಯೇ ಜಾಗತಿಕ ಜನಸಮುದಾಯದ ಬಹುದೊಡ್ಡ ಸೋಲು ಹೌದು. ತಂದೆ ತಾಯಿಯ ಪ್ರತಿಷ್ಠೆಗೆ ತಾನು ಪ್ರೀತಿಸುತ್ತಿದ್ದ ತನ್ನ ಕುಟುಂಬ ಹಾಗೂ ದೇಶವನ್ನು ಬಿಟ್ಟು ವೈದ್ಯಕೀಯ ಶಿಕ್ಷಣ ಪಡೆಯಲು ಆಕೆ ಇಂಗ್ಲೆಂಡಿಗೆ ಬರುತ್ತಾಳೆ. ಭೌತಿಕವಾಗಿ ತನ್ನವರನ್ನೆಲ್ಲ ಕಳೆದುಕೊಳ್ಳುವ ಈಕೆ; ಸಂಭಾಷಣೆಯ ಸಂವಹನದಲ್ಲಷ್ಟೇ ಅವರನ್ನು ಸಂಪರ್ಕಿಸುತ್ತಾಳೆ.

ಇಂಗ್ಲೆಂಡ್ ನಂಥ ದೂರ ದೇಶದ ಆರಂಭಿಕ ಜೀವನ ವಿದ್ಯಾರ್ಥಿಯನ್ನು ಅಭದ್ರಗೊಳಿಸುತ್ತದೆ. ತಂದೆ ತಾಯಿಗಳ ದೂರವಾಣಿಯ ಸಾಂತ್ವಾನದ ನುಡಿಗಳು ಆಕೆಯ ತಾಯ್ನಾಡಿನ ಅಗಲುವಿಕೆಯನ್ನು ಕ್ಷಣಿಕವಾಗಿ ನಿವಾರಿಸುತ್ತವೆ. ಹೀಗೆ ತಾನು ಇಂಗ್ಲೆಂಡನಲ್ಲಿದ್ದ ಕೆಲವು ವರ್ಷಗಳ ಬದುಕನ್ನು ಮೂರನೇ ವರ್ಷದ ಡಿಸೆಂಬರ್ ಕೊನೆಯ ದಿನದಂದು ಸ್ಮರಿಸಿಕೊಳ್ಳುತ್ತಾಳೆ. ಈ ದಿನ ಕ್ರಿಸ್ಮಸ್ ಹಬ್ಬ ಇರುವುದರಿಂದ ಹಾಸ್ಟೆಲ್ ನ ಬಹುತೇಕ ವಿದ್ಯಾರ್ಥಿಗಳು ತಮ್ಮ ಊರುಗಳಿಗೆ ಹೋಗಿದ್ದಾರೆ. ಇಂಗ್ಲೆಂಡನಲ್ಲಿ ಈ ಹೊಸ ವರ್ಷದ ಹಬ್ಬಕ್ಕೆ, ಯಾರೊಬ್ಬರೂ ತಮ್ಮ ಕುಟುಂಬದಿಂದ ದೂರ ಇರಲು ಇಷ್ಟಪಡುವುದಿಲ್ಲ. ಆದರೆ ಈ ವಿದ್ಯಾರ್ಥಿಗೆ ತಾನು ತನ್ನ ಕುಟುಂಬದವರೊಟ್ಟಿಗಿಲ್ಲ, ಎಂಬ ಕೊರಗು ಈ ಮೇಲಿನ ಮಾತುಗಳಲ್ಲಿ ಗೋಚರಿಸುತ್ತದೆ. ಹಾಸ್ಟೆಲ್ ನಲ್ಲಿ ಗಲಾಟೆ ಇಲ್ಲದ್ದ ರಿಂದ, ಅಲ್ಲಿನ ಪ್ರಶಾಂತತೆ ಹಾಗೂ ಒಳಗಿನ ತುಡಿತ ಈ ಪತ್ರ ಬರಹಕ್ಕೆ ಪ್ರೇರಕವಾಗಿದೆ. ಇರುವ ಕೆಲವೇ ವಿದ್ಯಾರ್ಥಿಗಳೆಲ್ಲ ಸೇರಿ ಕೇಕ್ ಕತ್ತರಿಸಿ, ಹೊಸ ವರ್ಷಾಚರಣೆ ಮಾಡುತ್ತಾರೆ. ಆದರೂ ವಿದ್ಯಾರ್ಥಿಗೆ ಸಂತೋಷವಿಲ್ಲ. ಅದಕ್ಕೆ ಬಹುಮುಖ್ಯ ಕಾರಣ ಈಕೆಯನ್ನು ಕಾಡುತ್ತಿರುವ ಅನಾಥ ಪ್ರಜ್ಞೆ,..

ಆರಂಭದ ದಿನಗಳಲ್ಲಿ ಗೊಂದಲಕ್ಕೀಡಾಗುತ್ತಿದ್ದ ವಿದ್ಯಾರ್ಥಿನಿ. ಈಗ ಇಲ್ಲಿನ ಇಂಗ್ಲೆಂಡ್ ಸಂಸ್ಕೃತಿಗೆ ಹೊಗ್ಗಿ ಹೋಗಿದ್ದಾಳೆ. ವಿಸ್ಕಿ ಮದ್ಯ ಕುಡಿದು, ಚಾನ್ಸಲರ್ ಸಿಗರೇಟ್ ಸೇದುವಷ್ಟು ಪಾಶ್ಚತ್ಯ ಸಂಸ್ಕೃತಿ ಅವಳ ಮೇಲೆ ಪ್ರಭಾವ ಬೀರಿದೆ. ಆಕೆ ಭಾರತದಲ್ಲಿದ್ದಾಗ ಇವೆಲ್ಲ ಅವಳ ಮೇಲೆ ಪ್ರಭಾವ ಬೀರಿಲ್ಲವೆಂದಲ್ಲ. ಆದರೆ ವಿದ್ಯಾರ್ಥಿ ಈ ಯಾವುದನ್ನು ತಾಯ್ನಾಡಿನಲ್ಲಿ ಕಲಿತದ್ದಲ್ಲ. ತನ್ನ ಇವತ್ತಿನ ಸ್ಥಿತಿ ನೆನೆದು; ಹೀಗೆ ಒಮ್ಮೆಲೇ ತನ್ನ ಬಾಲ್ಯಕ್ಕೆ ಜಾರುವ ವಿದ್ಯಾರ್ಥಿ ಸಾತ್ವಿಕ - ತಾಮಸ ಘಟನೆಗಳನ್ನೆಲ್ಲ ಸ್ಮರಿಸುತ್ತಾಳೆ.

ಅಪ್ಪ ಅಮ್ಮನ ಮದ್ಯ ಪಾನ ಹಾಗೂ ಧೂಮಪಾನದ ಅಭ್ಯಾಸಗಳು ಹಾಗೂ ಇಂಗ್ಲೆಂಡ್ ನ ಸಂಸ್ಕೃತಿಯ ಪ್ರಭಾವ ಇದಕ್ಕೆ ಮೂಲ. ತನ್ನ ಅಮ್ಮ ಬೆಳದಿಂಗಳ ರಾತ್ರಿಯಲ್ಲಿ ಚಂದ್ರನನ್ನು ತೋರಿಸುತ್ತಾ ತಿನ್ನಿಸುತ್ತಿದ್ದ ತುಪ್ಪದ ಅನ್ನ ದುಂಡೆ ಸಹ ಆಕೆಗೆ ನೆನಪಾಗುತ್ತದೆ. ಅನ್ನ ತಿನ್ನಲು ಹಠ ಮಾಡಿದರೆ ಚಂದ್ರನಿಗೆ ಕೊಟ್ಟುಬಿಡುತ್ತೇನೆ ಎನ್ನುತ್ತಿದ್ದ ಅಮ್ಮನ ಮಾತುಗಳು ಆಕೆಯಲ್ಲಿ ರೋಮಾಂಚನ ಉಂಟುಮಾಡಿದ್ದನ್ನು ನೆನೆಯುತ್ತಾಳೆ. ಚಂದ್ರನನ್ನು ಹಿಡಿಯುವ ಆಟವಂತು ಮರೆಯಲಾಗದ ಅವಿಸ್ಮರಣೆಯ ನೆನಪಾಗಿ ವಿದ್ಯಾರ್ಥಿಯ ಮನದಲ್ಲಿ ಉಳಿದಿದೆ. ಇವೆಲ್ಲ ನೆನಪುಗಳಿಗೆ ಮೂಲ ಕಾರಣ ಮೊನ್ನೆ ಕಾಣಿಸಿದ ಪೂರ್ಣ ಹುಣ್ಣಿಮೆಯ ದಿನದ ನೆನಪು ಹಾಗೂ ಚಂದ್ರನ ದರ್ಶನವೇ ಆಗಿದೆ. ಚಂದ್ರೋದಯದಂದು ಸಮುದ್ರ ಹೆಚ್ಚಿದ ಹಾಗೆ, ಮನಸ್ಸಿನ ಭಾವನೆಗಳು ಉಲ್ಬಣಿಸುತ್ತವೆ ಎಂಬ ನಂಬಿಕೆ ಇದೆ. ಹಾಗೆ ನೋಡಿದರೆ ಒಬ್ಬಂಟಿಯಾಗಿರುವ ಮಾನವನ ಮನಸ್ಸು ದೆವ್ವದಂತೆ. ಈ ಕಾರಣಕ್ಕಾಗಿಯೇ ಪ್ರಕೃತಿಯ ಶಿಶುವಾಗಿರುವ ಮಾನವನ ಇಂದ್ರಿಯ ಬಯಕೆಗಳು ಜಾಗೃತವಾಗುವುದು ಕೂಡ ಸಹಜ ಕ್ರಿಯೆ.

ಮೂಲತಃ ಎಲ್ಲಾ ಜೀವಸಂಕುಲಗಳಂತೆ ಮಾನವ ಕೂಡ ನಿಸರ್ಗದ ಒಂದಂಶವೆ. ಆದರೆ ಉಳಿದೆಲ್ಲ ಜೀವಿಗಳಿಗಿಂತ ಮನುಷ್ಯ ಬುದ್ಧಿಜೀವಿ; ಅಷ್ಟೇ ಅಲ್ಲದೆ ನಾಗರಿಕ ಪ್ರಜ್ಞೆ ಇರುವ ಜಗತ್ತಿನ ಏಕೈಕ ಪ್ರಾಣಿ. ಒಂದೆಡೆ ಪ್ರಾಕೃತಿಕವಾದ ಇಂದ್ರಿಯ ಸಹಜ ಬಯಕೆಗಳು; ಮತ್ತೊಂದೆಡೆ ನಾಗರಿಕವಾದ ನೈತಿಕ ಮೌಲ್ಯಗಳ ನಡುವೆ ಸಿಲುಕಿ ಮಾನವನ ಬದುಕು ಸಂಘರ್ಷ ನಡೆಸುವಂತಾಗಿದೆ. ವಿದ್ಯಾರ್ಥಿಗಳು ಜ್ಞಾನಾರ್ಜನೆಗಳಿಸುವ ಸನ್ಯಾಸಾಶ್ರಮದ ವಯೋಮಾನದಲ್ಲೇ, ಗೃಹಸ್ಥಾಶ್ರಮದ ಲೈಂಗಿಕ ಕಾಮನೆಗಳು ಅವರಲ್ಲಿ ಜಾಗೃತವಾಗುತ್ತವೆ. ಇಂತಹ ಪ್ರಕೃತಿ ಮತ್ತು ಸಂಸ್ಕೃತಿಯ ಸಂಘರ್ಷ, ಮಾನವನನ್ನು ಹೊರತುಪಡಿಸಿ ಉಳಿದ ಜೀವ ಪ್ರಭೇದಗಳಲ್ಲಿ ಇಲ್ಲ. ಈ ದಿಶೆಯಲ್ಲಿ ಮಾನವನ

ಬುದ್ಧಿಶಕ್ತಿ, ನಾಗರಿಕತೆ ಆತನಿಗೆ ವರವು ಹೌದು; ಶಾಪವೂ ಹೌದು. ನಾಗರಿಕನ ನೈತಿಕ ಜೀವನ ಪ್ರಕೃತಿ ವಿರೋಧಿಯಾಗಿಯೂ: ನಿಸರ್ಗದ ಸಹಜ ಜೀವನ ನಾಗರಿಕ ಮೌಲ್ಯಗಳ ಶತ್ರು ವಾಗಿಯೂ ಎದುರುಗೊಳ್ಳುವುದನ್ನು ಕತೆಯಲ್ಲಿ ಕಾಣಬಹುದು.

ಒಬ್ಬಂಟಿ ಭಾರತೀಯ ವೈದ್ಯ ವಿದ್ಯಾರ್ಥಿನಿಗೆ ಸಹಾಯ ಹಸ್ತ ನೀಡುವ ನೆಪದಲ್ಲಿ ಪರಿಚಿತನಾಗುವ ಜಾನ್ ಕೀಟ್ಸ್ ಆಕೆಯ ಸೀನಿಯರ್. ಕಾಲೇಜಿನಲ್ಲಿ ಯುರೋಪಿಯನ್ ವಿದ್ಯಾರ್ಥಿಗಳ ಕಿರುಕುಳದಿಂದ ರಕ್ಷಣೆ ನೀಡುವ ಕೀಟ್ಸ್ ನಲ್ಲಿ, ಆಕೆ ನಂಬಿಕೆ ಹಾಗೂ ಭರವಸೆಗಳನ್ನು ಇಡುತ್ತಾಳೆ. ಹಾಗೆ ನೋಡಿದರೆ ಕೀಟ್ಸ್ ನ ತಾತ ಈಸ್ಟ್ ಇಂಡಿಯಾ ಕಂಪನಿಯಲ್ಲಿ ಸೇರಿ ಇಂಡಿಯಾದಲ್ಲಿ ಬಹಳ ವರ್ಷಗಳ ಕಾಲ ಸಲ್ಲಿಸಿದ ಸೇವೆಯ ಹಿನ್ನೆಲೆ; ಕೀಟ್ಸ್ ನ ಜೊತೆಗಿನ ಸ್ನೇಹಕ್ಕೆ ಬಲ ನೀಡುತ್ತದೆ. ಆರಂಭದ ದಿನಗಳಲ್ಲಿ ಕೀಟ್ಸ್ ಯುವತಿಗೆ ನೀಡುತ್ತಿದ್ದ ಪುಸ್ತಕಗಳು ಹಾಗೂ ಅಧ್ಯಯನ ಸಾಮಗ್ರಿಗಳ ಸಹಾಯ, ಸ್ನೇಹ ಗಟ್ಟಿಯಾಗಲು ಕಾರಣವಾಗುತ್ತದೆ. ಆಕೆಗೆ ಇಷ್ಟವಾದ ಮಲ್ಲಿಗೆಯನ್ನು ಇಂಗ್ಲೆಂಡ್ ನ ಬೀದಿಗಳಲ್ಲಿ ಹುಡುಕಿ ತಂದುಕೊಟ್ಟು, ಕೀಟ್ಸ್ ಗೆಳೆತನದ ವಿಶ್ವಾಸ ಗಿಟ್ಟಿಸುತ್ತಾನೆ.

ಭಾರತೀಯರೆಂದರೆ ಇಷ್ಟವೆಂದು, ಅಲ್ಲಿನ ಯುವತಿಯರು ಅಪೂರ್ವ ಸುಂದರಿಯರೆಂದು ಹೇಳುತ್ತಾ; ಆತ ಆಕೆಯನ್ನು ಕುರಿತು ಒಂದೆರಡು ಕವಿತೆ ಬರೆಯುತ್ತಾನೆ. ಹೀಗೆ ಕೀಟ್ಸ್ ನ ಹೃದಯವಂತಿಕೆ, ಬುದ್ಧಿವಂತಿಕೆ ಹಾಗೂ ಮಾತುಗಾರಿಕೆಗೆ ಯುವತಿ ಮಾರುಹೋಗುತ್ತಾಳೆ. ಸ್ನೇಹದ ಸಲುಗೆ ಯುವತಿಯ ದೃಷ್ಟಿಯಲ್ಲಿ ಪ್ರೀತಿಯಾಗಿ ಮಾರ್ಪಟ್ಟು, ಇಬ್ಬರ ಸಂಬಂಧ ಇನ್ನಷ್ಟು ಗಾಢವಾಗುತ್ತದೆ. ಪ್ರೀತಿ ತನ್ನ ಪರಿಧಿಯನ್ನು ಮೀರಿ ಪ್ರಣಯದ ಸೆಳೆತಕ್ಕೆ ಸಿಲುಕುತ್ತದೆ. ಹೀಗೆ ತಾಯಿಗೆ ಬರೆಯುತ್ತಿರುವ ಪತ್ರದಲ್ಲಿ ಆಕೆಯ ಮನುಷ್ಯ ಸಹಜ ಸಂವೇದನೆಗಳು ಒಂದೊಂದಾಗಿ ಅನಾವರಣಗೊಳ್ಳುತ್ತವೆ. ಲೈಂಗಿಕ ಸುಖದ ಹಿಂದಿನ ನೆನಪುಗಳು ಆಕೆಗೆ ಮರುಕಳಿಸಿ ಈ ದಿನ ಆಕಾಶದಲ್ಲಿರುವ ಚಂದ್ರನನ್ನು ಎಳೆದು ತಂದು ತನ್ನ ಪಕ್ಕದಲ್ಲಿ ಮಲಗಿಸಿಕೊಳ್ಳುವ ಬಯಕೆಯಾಗುತ್ತದೆ. ಮರುಕ್ಷಣವೇ ಜಾಗೃತವಾಗುವ ಪ್ರಜ್ಞೆ; ಇದು ಮೆಡಿಸಿನ್ ಓದುತ್ತಿರುವ ನನ್ನಲ್ಲಿನ ಹುಚ್ಚು ಆಲೋಚನೆ ಎಂಬ ತೀರ್ಮಾನಕ್ಕೆ ಬರುತ್ತಾಳೆ. ಆಕೆಯ ಈ ಕನವರಿಕೆಗಳಿಗೆಲ್ಲ ಮೂಲ ಕಾರಣ ಬಾಯ್ ಫ್ರೆಂಡ್ ಜಾನಕೀಟ್ಸ್. ಇವನು ವಿದ್ಯಾರ್ಥಿನಿ ಬದುಕಿನಲ್ಲಿ ಚಂದ್ರನಂತಿದ್ದವನು. ಆತನೊಂದಿಗೆ ಕಳೆದ ಖಾಸಗಿ ಕ್ಷಣಗಳನ್ನು ಹೀಗೆ ತಾಯಿಯೊಂದಿಗೆ ಪತ್ರದ ಮೂಲಕ ಯುವತಿ ತೆರೆದಿಡುತ್ತಾ ಹೋಗುತ್ತಾಳೆ. "ಎಷ್ಟೋ ಬೆಳದಿಂಗಳ ರಾತ್ರಿಯಲ್ಲಿ ಚಂದ್ರನನ್ನು ನೋಡುತ್ತಾ ಅವನ ಮನೆಯ ವಿಶಾಲವಾದ ರೂಮಿನಲ್ಲಿ ಮಲ್ಲಿಗೆಯ ಹೂವಿನ ರಾಶಿಯ ಮೇಲೆ ಮಲಗಿ, ಅವನ ಹೇಮವರ್ಣದ ಎದೆಯ ಮೇಲೆ ಮಗುವಿನಂತೆ ತಲೆಯಿಟ್ಟು ನನ್ನ ಬೊಗಸೆ ತುಂಬಾ ಬೆಳದಿಂಗಳನ್ನು ತುಂಬಿಸಿಕೊಂಡಿದ್ದೇನೆ."[1] ಎಂದು ಆತನೊಂದಿಗೆ ಕಳೆದ ಖಾಸಗಿ ಕ್ಷಣಗಳನ್ನು ತಾಯಿಯೊಂದಿಗೆ ತೆರೆದಿಡುತ್ತಾಳೆ.

ಒದಿನಲ್ಲಿ ಎಂದಿಗೂ ಹಿಂದೆ ಬೀಳದ ವಿದ್ಯಾರ್ಥಿನಿ, ಕೀಟ್ಸ್ ನೊಂದಿಗೆ ಎರಡು ವರ್ಷಗಳ ಕಾಲ ಜೀವನ ನಡೆಸುತ್ತಾಳೆ. ಕೀಟ್ಸ್ ಈಕೆಯ ದೇಹದ ಇಂಚು ಇಂಚನ್ನು ಸವಿದು; ಅವಳಲ್ಲಿ ಹಲವು ಸವಿಗನಸುಗಳನ್ನು ಬಿತ್ತುತ್ತಾನೆ. ವಿದ್ಯಾರ್ಥಿನಿ ದೃಷ್ಟಿಯಲ್ಲಿ ತಮ್ಮಿಬ್ಬರ ಸಂಬಂಧ ಪವಿತ್ರ ಪ್ರೇಮದ ಆಚೆಗಿನ ಮುಕ್ತ ಸಂಬಂಧದ ಸಹಜೀವನದ ಪ್ರಣಯ ಅಷ್ಟೆ. ಆದರೆ ಕೀಟ್ಸ್ ನ ಮನದಲ್ಲಿ ಸುಖದ ಆಸ್ವಾದನೆ ಹೊರತುಪಡಿಸಿದರೆ, ಉಳಿದದ್ದೆಲ್ಲವೂ ನಗಣ್ಯ. ಆಕೆಯನ್ನು ಪ್ರೀತಿಯ ಹೆಸರಿನಲ್ಲಿ ಮೋಹಿಸಿ ಮಾತನಾಡಿದ ಮಾತುಗಳು ಕಾಲಕ್ರಮೇಣ ಅರ್ಥ ಕಳೆದುಕೊಳ್ಳುತ್ತಾ ಹೋಗುವುದನ್ನು ಕತೆಯಲ್ಲಿ ಕಾಣಬಹುದು. ಹೀಗೆ ವೈದ್ಯ ವಿಜ್ಞಾನದ ಕಲಿಕೆಗೆ ಬರುವ ವಿದ್ಯಾರ್ಥಿನಿಯ ಸ್ವಾತಂತ್ರ್ಯದ ಬದುಕು, ಕೀಟ್ಸ್ ಎಂಬ ಹಿರಿಯ ವಿದ್ಯಾರ್ಥಿ ಮಹಾಶಯನ ಸಹವಾಸದಿಂದ; ಸ್ವೇಚ್ಛಾಚಾರವಾಗಿ ಬದಲಾಗುತ್ತದೆ. ಯುವತಿಯ ಮನದಲ್ಲಿ ಹಲವು ಕಲ್ಪನೆಗಳನ್ನು ತುಂಬಿ, ಆಕೆ ಮೈಮರೆಯಲು ಕೀಟ್ಸ್ ಕಾರಣನಾಗುತ್ತಾನೆ.

ಆದರೆ ಆಕೆ ತಾನು ಗರ್ಭಿಣಿಯಾಗಿದ್ದೇನೆ, ವಿವಾಹವಾಗೋಣ ಎಂದರೆ, ನಿರಾಕರಿಸುತ್ತಾನೆ. ಈ ಘಟನೆ ನಂತರ ಕೀಟ್ಸ್ ಹೇಳುವ ಪ್ರತಿಯೊಂದು ಮಾತು ಆತನ ದುಷ್ಟತನದ ವ್ಯಕ್ತಿತ್ವವನ್ನು ಅನಾವರಣ ಮಾಡುತ್ತದೆ. ನಮಗಿನ್ನೂ ಇಪ್ಪತ್ತು ವರ್ಷ ಕೂಡ ಆಗಿಲ್ಲ, ಮದುವೆ ಬಗ್ಗೆ ಯೋಚಿಸಿದರೆ ಸಮಾಜ ನಗುತ್ತದೆ ಎನ್ನುತ್ತಾನೆ. ಆದರೆ ಸಮಾಜ ಬಾಹಿರವಾದ ಸಂಬಂಧದ ಬಗ್ಗೆ ಆತನಿಗೆ ಎಳ್ಳಷ್ಟು ಮುಜುಗರ ಎನಿಸುವುದಿಲ್ಲ. ಆತನ ಉಪದೇಶ ಮುಂದುವರಿಯುತ್ತದೆ. ಭಾರತೀಯ ಭಾವನೆಗಳಿಗೆ ಒಳಗಾಗಬೇಡ ಎಂಬ ಹಿತವಚನ ಹೇಳುತ್ತಾನೆ. ಭಾರತೀಯರು ಭೂತ, ಭವಿಷ್ಯತ್‌ಗಳಲ್ಲಿ ನಂಬಿಕೆ ಇಟ್ಟವರು, ಆದರೆ ನಾವಿಲ್ಲಿ ವರ್ತಮಾನದ ಸುಖಕ್ಕಾಗಿ; ಸುಖದ ಅನ್ವೇಷಣೆಯಲ್ಲಿ ಇರುವವರು. ಈ ಕ್ಷಣದ ಸುಖ ಹೊರತುಪಡಿಸಿ, ಇನ್ನುಳಿದದ್ದರ ಬಗ್ಗೆ ನಾನು ಆಲೋಚಿಸುವುದಿಲ್ಲ ಎನ್ನುತ್ತಾನೆ ಕೀಟ್ಸ್.ಈ ಮಾತುಗಳಲ್ಲಿ ಮುಂದೆ ವಿದ್ಯಾಭ್ಯಾಸ ಪೂರ್ಣಗೊಂಡಾಗಲಾದರೂ ವಿವಾಹವಾಗುವ

ಯಾವ ಭರವಸೆಯು ದೊರೆಯುವುದಿಲ್ಲ. ಉದ್ಯೋಗಿಗಳಾದ ನಂತರ ಸಾಂಸಾರಿಕ ಜೀವನ ನಡೆಸುವ ಯಾವ ಭರವಸೆಯನ್ನು ಕೀಟ್ಸ್ ಯುವತಿಗೆ ನೀಡುವುದಿಲ್ಲ. ಬದಲಾಗಿ ಆಕೆಯನ್ನು ಇನ್ನಷ್ಟು ಭೋಗಿಸಬೇಕೆಂಬ ಬಯಕೆಯೇ ಕಾಣುತ್ತದೆ. 'ನಿಜ ಹೇಳ್ತಿದ್ದೀನಿ ಯಾವ ಯುರೋಪಿಯನ್ ಗರ್ಲ್ ಕೂಡ ನಿನ್ನಷ್ಟು ಅದ್ಭುತವಾಗಿಲ್ಲ 'ಎನ್ನುವ ಕೀಟ್ಸ್ ನ ಮಾತುಗಳು ಅವನ ದುಷ್ಟ ವ್ಯಕ್ತಿತ್ವ ಅರ್ಥೈಸಿಕೊಳ್ಳಲು ಪುಷ್ಟಿ ನೀಡುತ್ತವೆ.

ಪ್ರೀತಿಯ ಸಹಚರಿಯಾಗಿ ಬಂದ ಕಾಮವೇ ಮುಖ್ಯವಾಗಿ; ನಿಷ್ಕಲ್ಮಶ ಪ್ರೀತಿಯ ಕಾಳಜಿಯ ಗೈರು ಹಾಜರಿಯನ್ನು ಕೀಟ್ಸ್ ನ ಪ್ರತಿಯೊಂದು ಮಾತುಗಳಲ್ಲಿ ಸಹ ಗುರುತಿಸಬಹುದು. ಕೀಟ್ಸ್ ಯುವತಿಯಲ್ಲಿ ಬಯಸಿದ್ದು ಪ್ರೀತಿಯಲ್ಲ, ಬದಲಾಗಿ ಲೈಂಗಿಕ ತೃಷೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಈತನ ಈ ನಿಲುವನ್ನು ವಿರೋಧಿಸುವ ಯುವತಿ 'ತಮಾಷೆ ಮಾಡಬೇಡ' ಎಂದು ಭಾವುಕವಾಗಿ ವಿರೋಧ ವ್ಯಕ್ತಪಡಿಸುತ್ತಾಳೆ. ಆದರೆ ಕೀಟ್ಸ್ ನಿಂದ ತನಗಾದ ಲೈಂಗಿಕ ದೌರ್ಜನ್ಯದ ವಿರುದ್ಧ ಗಟ್ಟಿಯಾದ ಧ್ವನಿ ಎತ್ತುವುದಿಲ್ಲ. ಏಕಮುಖ ಲೈಂಗಿಕ ಬಲತ್ಕಾರದ ಬದಲು, ಯುವತಿಯ ಸಹಜೀವನದ ಒಪ್ಪಿತ ಲೈಂಗಿಕ ಸಂಬಂಧವೇ ಇದಕ್ಕೆ ಬಹು ಮುಖ್ಯ ಕಾರಣ. ಯುವತಿಯಲ್ಲಿರುವ ನೈತಿಕ ಹಾಗೂ ಮೌಲಿಕ ವಿಚಾರಗಳ ಅರಿವಿನ ಕೊರತೆಯ ಜತೆಗೆ; ಬಾಲ್ಯ ಜೀವನದ ಕೆಟ್ಟ ನಿದರ್ಶನ ಹಾಗೂ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಕೂಡ ಈ ಘಟನೆಯಲ್ಲಿ ಆಕೆಯ ವಿಫಲತೆಗೆ ಕಾರಣವಾಗುತ್ತವೆ. ಯುವತಿಗೆ ಬಾಲ್ಯದಲ್ಲಿ ತಾನು ನೋಡಿದ ಅನೈತಿಕ ಘಟನೆಗಳು ನೆನಪಾಗಿ, ಕೀಟ್ಸ್ ನ ವಂಚನೆ ಸಹಜವಾಗಿ ಕಾಣುತ್ತದೆ.

ತನ್ನ ತಾಯಿ ಅನಾರೋಗ್ಯದಿಂದ ಆಸ್ಪತ್ರೆಯಲ್ಲಿದ್ದಾಗ, ಅಪ್ಪ ತನ್ನ ಸೆಕ್ರೆಟ್ರಿಯೊಂದಿಗೆ ಹೊಂದಿದ್ದ ಅನೈತಿಕ ಸಂಬಂಧ ಆಕೆಯ ಈಗಿನ ತಪ್ಪು ನಡೆಗೆ ಬೆಂಬಲ ನೀಡುತ್ತದೆ. ಅಂತೆಯೇ ತನ್ನಪ್ಪ ಪ್ರವಾಸಕ್ಕೆಂದು ಹೊರಹೋಗಿದ್ದಾಗ, ತಾಯಿ ತಮ್ಮ ಮನೆಯ ಡ್ರೈವರ್ ನೊಂದಿಗೆ ಹೊಂದಿದ್ದ ಅಕ್ರಮ ಲೈಂಗಿಕ ಸಂಬಂಧ ಯುವತಿ ಅಧಃಪತನಗೊಳ್ಳಲು ಪೂರಕ ಕಾರಣಗಳಾಗುತ್ತವೆ. ಹೀಗೆ ತಂದೆ ತಾಯಿ ಇಬ್ಬರ ವಿಷಯದಲ್ಲೂ ಅನೈತಿಕತೆ ಗುರುತಿಸಿದ್ದ ಯುವತಿ, ಕೀಟ್ಸ್ ನೊಂದಿಗಿನ ಅನೈತಿಕ ಸಂಬಂಧಕ್ಕೆ ಸಮ್ಮತಿಸುತ್ತಾಳೆ. ತಾನು ಈ ಹಿಂದೆ ಕಂಡ ಕನಸುಗಳ ಪ್ರೀತಿಯ ದಾಂಪತ್ಯ ಜೀವನದ ಎಲ್ಲಾ ಆಲೋಚನೆಗಳನ್ನು ಕೀಟ್ಸ್ ನಿರ್ಮಿತ ಪುರುಷಧಿಕಾರಕ್ಕೆ ಬಲಿಕೊಡುತ್ತಾಳೆ. ಇಂಗ್ಲೆಂಡ್ ನ ಮುಕ್ತ ಲೈಂಗಿಕ ಜೀವನದ ಪರಿಸರ; ಅವಳ ಮೇಲೆ ಇನ್ನಿಲ್ಲದ ಪ್ರಭಾವ ಬೀರಿ, ದೇಹ ಸುಖಕ್ಕಷ್ಟೇ ಆತೊರೆಯುವ ಕೀಟ್ಸ್ ನಂತೆ ತಾನು ಬದಲಾಗುತ್ತಾಳೆ. ಸುಖಕ್ಕಾಗಿ ಮುಖಾಮುಖಿಯಾಗುವ ಇಂಗ್ಲೆಂಡ್ ಸಂಸ್ಕೃತಿಯ ಒಂದಂಶವಾಗಿ ಯುವತಿ ಬದಲಾಗುತ್ತಾಳೆ. ಕೀಟ್ಸ್ ನ ಮಾತು ಕೇಳಿ ಗರ್ಭಪಾತ ಮಾಡಿಸಿಕೊಂಡು, ದೈಹಿಕ ಸುಖವನ್ನು ಒಂದು ಸಹಜ ಕ್ರೀಡೆಯಾಗಿ ಸ್ವೀಕರಿಸುತ್ತಾಳೆ. ಯುವತಿ ಅನೈತಿಕ ಮಾರ್ಗದಲ್ಲಿ ಮುಂದುವರೆಯಲು ಕೀಟ್ಸ್ ಮುಖ್ಯ ಕಾರಣನಾದರೆ; ಇತರೆ ಹಲವಾರು ಕಾರಣಗಳು ಕೊಡುಗೆ ಕೂಡ ಬಹಳಷ್ಟು ಇದೆ.

ಯುವತಿಗೆ ಲಂಡನ್ ನಲ್ಲಿ ಓದಬೇಕೆಂಬ ಆಸಕ್ತಿಯಾಗಲಿ, ಇಚ್ಚೆಯಾಗಲಿ, ಖಂಡಿತ ಇರಲಿಲ್ಲ. ಭಾರತದಲ್ಲೇ ಅಧ್ಯಯನ ಮಾಡಬೇಕೆಂಬ ಅದಮ್ಯ ಬಯಕೆ ಇತ್ತು. 'ಆಕೆಯೇ ಹೇಳುವಂತೆ ವಿಜ್ಞಾನದಷ್ಟೇ ಇತಿಹಾಸ ಕೂಡ ಅವಳ ಮೆಚ್ಚಿನ ವಿಷಯವಾಗಿತ್ತು.' ಬಾಲ್ಯದಲ್ಲಿ, ಯುವತಿಯ ಮೇಲೆ ಗಾಂಧಿ ಆಲೋಚನೆಗಳು ಹೆಚ್ಚಿನ ಪ್ರಭಾವವನ್ನು ಉಂಟು ಮಾಡಿದ್ದವು. ವೈದ್ಯಳಾಗಿ ಬಡವರ ಸೇವೆ ಮಾಡುವ ಮಹತ್ವಕಾಂಕ್ಷೆ ಕೂಡ ಆಕೆಯಲ್ಲಿ ಇತ್ತು. ಆದರೆ ರಾಜಕಾರಣಿಯು, ಮಂತ್ರಿಯೂ ಆಗಿದ್ದ ಆಕೆಯ ತಂದೆ; ಯುವತಿಯನ್ನು ತನ್ನ ಸುತ್ತಲ ಪರಿಸರದಿಂದ ಪ್ರತ್ಯೇಕಿಸಿ ಶ್ರೇಷ್ಠತೆಯ ವ್ಯಸನಕ್ಕೆ ಬಲಿಪಶು ಮಾಡುತ್ತಾನೆ. ಬಾಲ್ಯದಿಂದಲು ಆಕೆಯನ್ನು ತಮ್ಮ ಮನೆಯ ಬೀದಿಯ ಮಕ್ಕಳೊಂದಿಗೂ ಕೂಡ, ಬೆರೆಯಲು ಅವರ ತಂದೆ ಅವಕಾಶ ನೀಡಲಿಲ್ಲ. ಶಾಲೆಯಲ್ಲೂ ಕೂಡ ಸ್ನೇಹಿತರೊಂದಿಗೆ ಸಹಜವಾಗಿರಲು, ಆಕೆಗೆ ತಂದೆ ಕಲ್ಪಿಸಿಕೊಟ್ಟ ಪ್ರತ್ಯೇಕ ಸೌಲಭ್ಯಗಳು ಅಡ್ಡಿ ಪಡಿಸಿದ್ದವು. ಸ್ವತಃ ಚಿಕ್ಕಪ್ಪನ ಮಕ್ಕಳೊಂದಿಗೂ ಮಾತನಾಡಲು ಸಾಧ್ಯವಾಗದಷ್ಟು ಪ್ರತಿಕೂಲ ವಾತಾವರಣ ಆಕೆಯ ಬಾಲ್ಯದಲ್ಲಿ ನಿರ್ಮಾಣವಾಗಿತ್ತು. ಈ ಎಲ್ಲಾ ಘಟನೆಗಳು ಬಾಲ್ಯದಿಂದಲೇ ಆಕೆ ಒಂಟಿಯಾಗಿ ಬೆಳೆಯಲು ಕಾರಣವಾದವು. ವಿವೇಚನೆ ಇಲ್ಲದೆ ನಿರ್ಮಾಣವಾದ ನಿರ್ವಾತ ಪರಿಸರ, ಯುವತಿ ಸಮಾಜ ದರ್ಶನದಿಂದ ವಿಮುಖಗೊಳ್ಳಲು ಕಾರಣವಾಗುತ್ತದೆ.

ಇಂತಹ ಒಂಟಿತನದ ಜೀವನ ಯುವತಿಯ ಅರಿವಿಗೆ ಬರದಂತೆ; ಅನೇಕ ವಿಕಾರಗಳನ್ನು ಅವಳಲ್ಲಿ ಸೃಷ್ಟಿಸುತ್ತಾ ಹೋಗುತ್ತದೆ. ಅದು ಕೊನೆಗೊಮ್ಮೆ ಇಂಗ್ಲೆಂಡ್ನ ಲ್ಲಿ ಕೀಟ್ಸ್ ನಂತಹ ಶೋಷಿತನಿಂದ ಸ್ಫೋಟಗೊಂಡು; ಬದುಕನ್ನು ಬಲಿಪಶು ಮಾಡುತ್ತದೆ. ಇಲ್ಲಿ ತನ್ನ ಮಗಳನ್ನೆ, ಆಸ್ತಿಯನ್ನಾಗಿ ಮಾಡಬೇಕಾಗಿದ್ದ ತಂದೆ, ಮಗಳಿಗೆ ಆಸ್ತಿಗಳಿಸಿ ವೈಭವದ ಸೌಲಭ್ಯ ಕಲ್ಪಿಸಿ, ವಾಸ್ತವಿಕವಾದ ಸಹಜ

ಬದುಕಿಗೆ ಅಡ್ಡಿಪಡಿಸುತ್ತಾನೆ. ಮಕ್ಕಳಿಗೆ ಏನು ತಿಳಿಯುವುದಿಲ್ಲ, ಎಂದು ಅವರ ಬಾಲ್ಯದಲ್ಲಿ ದೊಡ್ಡವರು ನಡೆಸುವ ಅನಾಚಾರಗಳೇ ಇಲ್ಲಿ ಯುವಜನತೆಯ ಕತ್ತಲ ಬದುಕಿಗೆ ದಾರಿಯಾಗಿವೆ. ತಂದೆಯ ಆಸ್ತಿ, ಅಧಿಕಾರ ಯಾವುದು ಈಗ ಮಗಳ ಅರ್ಥ ಕಳೆದುಕೊಂಡ ಬದುಕನ್ನು ಸರಿಪಡಿಸಲಾರದು. ಆಕೆಯಲ್ಲಿರುವ ಮಾನಸಿಕ ಕ್ಷೋಭೆಯನ್ನು ಸುಲಭದಲ್ಲಂತೂ ಪರಿಹರಿಸಲಾಗದು. ಯುವತಿ ಇಂಗ್ಲೆಂಡಿಗೆ ಬಂದ ಆರಂಭದಲ್ಲಿ; ಇಲ್ಲಿನ ಗಂಡು- ಹೆಣ್ಣುಗಳ ಮುಕ್ತ ಸಂಬಂಧಗಳನ್ನು ತಿರಸ್ಕರಿಸುತ್ತಾ ಇದ್ದವಳು. ಆದರೆ ಈಗ ಇಲ್ಲಿನ ಎಲ್ಲವನ್ನು ಒಪ್ಪಿ ಸ್ವೀಕರಿಸುವಷ್ಟು ಬದಲಾಗಿದ್ದಾಳೆ. 'ನೈತಿಕತೆಗಿಂತಲೂ ಅನೈತಿಕತೆಯಲ್ಲೇ ಮಾನವ ಹೆಚ್ಚು ಆಸಕ್ತಿ ಮತ್ತು ಸುಖ ಹೊಂದುತ್ತಾನೆ' ಎನ್ನುವ ಮನೋವಿಜ್ಞಾನಿಯ ಮಾತನ್ನು ಉಲ್ಲೇಖಿಸಿ ಅಂತೇ ತಾನು ಮುಂದುವರೆಯುತ್ತಾಳೆ.

ಯುವತಿಗೆ ತಂದೆ ತಾಯಿಗಳು ಭೌತಿಕವಾದ ಎಲ್ಲ ಸವಲತ್ತುಗಳನ್ನು ಒದಗಿಸುತ್ತಾರೆ. ಆದರೆ ಭಾವನಾತ್ಮಕ ಬೆಂಬಲ, ದೂರವಾಣಿಗಷ್ಟೇ ಸೀಮಿತವಾಗುತ್ತದೆ. ಇಂಗ್ಲೆಂಡ್ ನಲ್ಲಿ ನ ಶಿಕ್ಷಣಕ್ಕೆ ಯುವತಿಯನ್ನು ಕಳುಹಿಸಿದ ತರುವಾಯ; ತಂದೆ ತಾಯಿ ಅಲ್ಲಿಗೆ ಹೋಗಿ, ಮಗಳ ಯೋಗಕ್ಷೇಮ ವಿಚಾರಿಸುವಲ್ಲಿ ಎಡವುತ್ತಾರೆ. ಮಗಳು ವಿದೇಶದಲ್ಲಿ ಶಿಕ್ಷಣ ಪಡೆಯುತ್ತಿದ್ದಾಳೆ ಎಂಬ ಪ್ರತಿಷ್ಠೆ ಮುಖ್ಯವಾಗಿದ್ದಷ್ಟು, ಅವಳ ಹಿತರಕ್ಷಣೆ ಪೋಷಕರ ಮೊದಲ ಆದ್ಯತೆ ಆಗಿರಲಿಲ್ಲ. ತಾನೇ ಭಾರತಕ್ಕೆ ಬಂದು ಹೋಗಬಹುದಾದ ಸಾಧ್ಯತೆಗಳ ಕಡೆಗೂ ಕೂಡ ಯುವತಿ; ಗಮನ ಹರಿಸುವುದಿಲ್ಲ. ಆ ಬಗೆಯ ಸ್ವಾತಂತ್ರ್ಯವನ್ನು ಪೋಷಕರು ಆಕೆಗೆ ನೀಡಿರಲಿಲ್ಲ ಎಂದು ಕಥೆ ಸಮರ್ಥಿಸುತ್ತದೆ. ನಿಜ, ಹಾಗಾದರೆ ಕೀಟ್ಸ್ ನೊಂದಿಗಿನ ಸ್ವೇಚ್ಛಾಚಾರದ ಬದುಕಿಗೆ, ಪೋಷಕರು ಸ್ವಾತಂತ್ರ್ಯ ನೀಡಿದ್ದರೆ, ಎಂಬ ಪ್ರಶ್ನೆ ಸಹ ಎದುರಾಗುತ್ತದೆ. ಏಕಾಂಗಿತನದ ನಿವಾರಣೆಗೆ ಕೀಟ್ಸ್ ನ ಸ್ನೇಹ ಬೆಳೆಸಿ; ಫ್ರಾನ್ಸ್ ವರೆಗೆ ಹೋಗಿ ಸುತ್ತಾಡುವ ಯುವತಿಗೆ, ತಾಯ್ನಾಡಿಗೆ ಹೋಗಿ ಬರುವ ಆಲೋಚನೆ ಹೊಳೆಯದೆ ಇದ್ದುದೊಂದು ಯಕ್ಷಪ್ರಶ್ನೆ.

ಕೀಟ್ಸ್ ಪರಿಚಯವಾದ ಎರಡು ವರ್ಷಗಳ ತರುವಾಯ ಆತನ ಸ್ನೇಹಿತನೇ ಆದ ಟಾಮ್ ಹ್ಯಾಂಕ್ಸ್ ಕೂಡ, ಯುವತಿಯ ಗೆಳೆಯನಾಗುತ್ತಾನೆ. ಈತ ಅಸ್ಟ್ರಾನಮಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿ, ಈತನ ತಂದೆ ಷೇರು ವ್ಯಾಪಾರಿಯಾಗಿ ಮಿಲಿಯನೇರ್ ಆಗಿ ಬೆಳೆದವನು. ಪರಿಚಯವಾದ ಕ್ಷಣದಲ್ಲೇ, ಈತ ಯುವತಿಯ ಕೈಕುಲುಕಿ ಆಕೆಗೊಂದು ಮುತ್ತು ಕೊಡುತ್ತಾನೆ. ಈತನ ಸ್ಪರ್ಶ ಒರಟಾಗಿದ್ದರು, ಕೀಟ್ಸ್ ಗಿಂತಲೂ ಹಿತವಾಗಿದೆ ಎನ್ನುತ್ತಾಳೆ ಯುವತಿ. ಅಲ್ಲಿಗೆ, ಈ ಘಟನೆಯಿಂದ ಅನೈತಿಕ ದೇಹ ಸುಖ; ಯುವತಿಯ ಬದುಕಿನಲ್ಲಿ ಮತ್ತೊಬ್ಬನ ಆಹ್ವಾನಕ್ಕೂ ಸಜ್ಜಾಗಿರುವುದನ್ನು ಸೂಕ್ಷ್ಮವಾಗಿ ತೆರೆದಿಡುತ್ತದೆ. ಆಕೆ ತನಗೆ ಇಷ್ಟು ದಿನ ಟಾಮ್ ಹ್ಯಾಂಕ್ಸ್ ನನ್ನು ಪರಿಚಯ ಮಾಡಿಸದಿದ್ದಕ್ಕಾಗಿ ಕೀಟ್ಸ್ ನನ್ನು ಪ್ರಶ್ನಿಸುತ್ತಾಳೆ. ಆ ದಿನ ಟಾಮ್ ಹ್ಯಾಂಕ್ಸ್ ನ ಹುಟ್ಟಿದ ದಿನ. ಆಚರಣೆಗಾಗಿ ವಿಮಾನದಲ್ಲಿ ಪ್ಯಾರಿಸ್ ಗೆ ಹೋಗುತ್ತಾರೆ. ಅಲ್ಲಿನ ನೈಟ್ ಕ್ಲಬ್ ನಲ್ಲಿ ಬರ್ತಡೇ ಆಚರಿಸಿ, ಮೂವರು ಮದ್ಯಪಾನ ಮಾಡುತ್ತಾರೆ. ಅಂದು ರಾತ್ರಿ ಪ್ಯಾರಿಸ್ ನಲ್ಲೆ ಉಳಿಯಲು ತೀರ್ಮಾನಿಸಿ, ಒಂದೇ ಕೊಠಡಿಯಲ್ಲಿ ಮೂವರು ಮಲಗುತ್ತಾರೆ. ಯುವತಿ ಪತ್ರದಲ್ಲಿ ತಾಯಿಗೆ ಹೇಳುತ್ತಿದ್ದಾಳೆ "ಮಮ್ಮಿ ಈ ಕೀಟ್ಸ್ ಮತ್ತು ಹ್ಯಾಂಕ್ಸ್ ಏನನ್ನು ಬೇಕಾದರೂ ಹಂಚಿಕೊಳ್ಳುವರಂತೆ ಅಂದು ರಾತ್ರಿ ನನ್ನನ್ನು ಹಂಚಿಕೊಂಡಿದ್ದರು ಮತ್ತು ನನಗದೊಂದು ಅಪೂರ್ವವಾದ ಅನುಭವವನ್ನು ನೀಡಿತ್ತು."[2] ಇಬ್ಬರ ನಡುವೆ ಇದ್ದ ಒಪ್ಪಿತ ಸಹಜೀವನ, ಹ್ಯಾಂಕ್ಸ್ ನ ಪ್ರವೇಶದಿಂದ ಮೂವರನ್ನು ಲೈಂಗಿಕ ಕಾರ್ಯಕರ್ತರನ್ನಾಗಿ ಮಾರ್ಪಡಿಸುತ್ತದೆ. ಇಂಗ್ಲೆಂಡ್ ನ ಈ ಇಬ್ಬರು ಸ್ನೇಹಿತರು ಸರಕನ್ನು ಹಂಚಿಕೊಳ್ಳುವಂತೆ ಯುವತಿಯನ್ನು ಹಂಚಿಕೊಂಡು ಬೋಗಿಸುತ್ತಾರೆ. ಹಾಗೆ ನೋಡಿದರೆ ಸೆಕ್ರೆಟರಿ, ತಾಯಿ, ಯುವತಿ ಈ ಮೂವರ ಲೈಂಗಿಕ ಸಂಬಂಧಗಳು ಮೇಲ್ನೋಟಕ್ಕೆ ಒಪ್ಪಿತವೆಂದು ಕಂಡರು, ಇವರೆಲ್ಲ ಪುರುಷ ನಿರ್ಮಿತ ಲೈಂಗಿಕ ಶೋಷಣೆಯ ಬಲಿಪಶುಗಳಾಗಿದ್ದಾರೆ. ಈ ದಿಕ್ಕಿನಲ್ಲಿ ಸಿಮೋನ್ ದಾ ಬೋವಾಳ 'ಸೆಕೆಂಡ್ ಸೆಕ್ಸ್' ಕೃತಿ ನಮ್ಮಲ್ಲಿ ಹುಟ್ಟುವ ಎಲ್ಲಾ ಪ್ರಶ್ನೆಗಳಿಗೂ ಉತ್ತರ ನೀಡಲು ಸಶಕ್ತವಾಗಿದೆ.

ಹ್ಯಾಂಕ್ಸ್ ನ ಪರಿಚಯವಾದ ಮೇಲೆ ಯುವತಿ ಅವನೊಟ್ಟಿಗೆ ಹೆಚ್ಚು ಕಾಲ ಕಳೆಯುತ್ತಾಳೆ. ಒಂದು ಕಡೆ ಕೀಟ್ಸ್ ಮೆಡಿಸನ್ ಹಾಗೂ ಕವಿತೆಯ ಹಿನ್ನೆಲೆಯಲ್ಲಿ ಹುಸಿ ಚರ್ಚೆ ನಡೆಸುತ್ತಾ ಅವಳನ್ನು ಭೋಗಿಸಿದರೆ; ಇನ್ನೊಂದು ಕಡೆ ಹ್ಯಾಂಕ್ಸ್ ಬ್ರಹ್ಮಾಂಡ ಜ್ಞಾನದ ಪೊಳ್ಳು ವಿಚಾರಗಳ ಮೂಲಕ ಅವಳನ್ನು ವಶ ಮಾಡಿಕೊಳ್ಳುತ್ತಾನೆ. ಯುವತಿಯ ದೇಹವನ್ನೇ ಯೂನಿವರ್ಸ್ ಮಾಡಿಕೊಂಡು ನಕ್ಷತ್ರ,, ಗೆಲಾಕ್ಸಿಗಳ ಬಗ್ಗೆ ಆಸಕ್ತಿ ಹುಟ್ಟುವಂತೆ ಮಾಡುತ್ತಾನೆ. ಹಾಗೆ ನೋಡಿದರೆ, ನೈತಿಕ ಹಾಗೂ ಮಾನವೀಯವಾದ ಮೌಲ್ಯಗಳಿಲ್ಲದ ಯಾವ ಜ್ಞಾನವು ಹುಸಿ ಚರ್ಚೆಯಾಗಿಯೇ ನಮಗೆ ಗೋಚರವಾಗುತ್ತದೆ.

ಅಂತೆಯೇ ಯುವತಿಯನ್ನು ಸೂರೆಗೊಂಡು ಕಾಮತೃಷೆ ತೀರಿಸಿಕೊಳ್ಳುವ ಇವರಿಗೆ ನಿಜವಾದ ವಿದ್ಯೆ ಮತ್ತು ಜ್ಞಾನದ ಅರಿವಿಲ್ಲ. ಆಕಸ್ಮಿಕವಾಗಿ

ವಿದ್ಯಾರ್ಥಿಗಳಾದ ಇವರು, ಆಂತರ್ಯದಲ್ಲಿ ನಿಜಕ್ಕೂ ಲೈಂಗಿಕ ಕಾರ್ಯಕರ್ತರಂತಿದ್ದಾರೆ. ಈ ಯುವಕರ ನಡವಳಿಕೆ ಈ ಮಾತಿಗೆ ಪುಷ್ಟಿ ನೀಡುತ್ತವೆ. ಹ್ಯಾಂಕ್ಸ್ ಗೆ ವಿಪರೀತದ ಡ್ರೈವಿಂಗ್ ಹುಚ್ಚು.. ಆತ ಅನೇಕ ಟೂರ್ನಮೆಂಟ್ ಗಳಲ್ಲಿ ಭಾಗವಹಿಸಿ ಹಲವು ಪ್ರಶಸ್ತಿ ಸಹ ಗಳಿಸಿಕೊಳ್ಳುತ್ತಾನೆ. ಯುವತಿಗೆ ಹ್ಯಾಂಕ್ಸ್ ಡ್ರೈವ್ ಮಾಡುವಾಗ ಕಾರಿನಲ್ಲಿ ಕುಳಿತುಕೊಳ್ಳುವುದೇ ಒಂದು ರೋಮಾಂಚನಕಾರಿ ಅನುಭವ ನೀಡುತ್ತದೆ. ಹೀಗೆ ಸತತ ಎಂಟು ತಿಂಗಳ ಕಾಲ ಈ ಇಬ್ಬರೊಟ್ಟಿಗೂ ಯುವತಿ ದೇಹ ಹಂಚಿಕೊಂಡು ಜೀವನ ನಡೆಸುತ್ತಾಳೆ. ಮೊದಲಿನಂತೆ ಈ ಅವಧಿಯಲ್ಲೂ ಅಧ್ಯಯನದಲ್ಲಿ, ಪರೀಕ್ಷೆಯಲ್ಲಿ ಯುವತಿ ಹಿಂದೆ ಬೀಳುವುದಿಲ್ಲ. ತನ್ನ ತರಗತಿಯ ಉಳಿದ ವಿದ್ಯಾರ್ಥಿಗಳಿಗಿಂತ ಅಂಕ ಗಳಿಕೆಯಲ್ಲಿ ಮುಂದೆ ಇದ್ದಾಳೆ. ಅಂತದೆ ಒಂದು ದಿನ ಕಾರ್ ಟೂರ್ನಮೆಂಟ್ ಒಂದರಲ್ಲಿ ಹ್ಯಾಂಕ್ಸ್ ನ ಕಾರು ಅಪಘಾತವಾಗಿ ಪುಡಿಪುಡಿಯಾಗುವುದರೊಂದಿಗೆ ಆತ ಕೂಡ ಸಾವಿನ ಸಮೀಪ ಬಂದು ನಿಲ್ಲುತ್ತಾನೆ. ಆತನಿಗಾಗಿ ಯುವತಿ ರಕ್ತ ಕೂಡ ದಾನ ಮಾಡುತ್ತಾಳೆ. ಆದರೂ ಕೂಡ ಹ್ಯಾಂಕ್ಸ್ ಬದುಕುಳಿಯುವುದಿಲ್ಲ.

ಯುವತಿಗೆ ಈ ಘಟನೆಯಿಂದ ದುಃಖ, ಹತಾಷೆ ಎರಡು ಉಂಟಾಗುತ್ತವೆ. ಹ್ಯಾಂಕ್ಸ್ ಮರಣ ಹೊಂದಿದ ಮೂರು ದಿನಗಳಿಗೆ; ಆಕೆಗೆ ವಿಪರೀತ ಜ್ವರ ಬರುತ್ತದೆ. ಕೀಟ್ಸ್ ವೈದ್ಯರನ್ನು ಕರೆತಂದು ಚಿಕಿತ್ಸೆ ಕೊಡಿಸುತ್ತಾನೆ. ಜ್ವರದಿಂದ ಗುಣಮುಖವಾದರೂ, ಆಕೆಗೆ ನಿಶ್ಯಕ್ತಿ ಪದೇಪದೇ ಕಾಡುತ್ತದೆ. ಅದರೊಟ್ಟಿಗೆ ಹೇಳಿಕೊಳ್ಳಲಾಗದ ನೋವಿನ ತೀವ್ರತೆ ಯುವತಿಯ ಅನುಭವಕ್ಕೆ ಬರುತ್ತದೆ. ಕೀಟ್ಸ್ ಕೂಡ ಈ ಸಂದರ್ಭದಲ್ಲಿ ಮಂಕಾಗಿರುತ್ತಾನೆ. ಯುವತಿ ಬರೆದ ಪತ್ರದ ಮುಂದಿನ ಭಾಗ ದುರಂತ ಘಟನೆಯೊಂದನ್ನು ತೆರೆದಿಡುತ್ತದೆ. ಹ್ಯಾಂಕ್ಸ್ ಸಾವಿನ ಇಪ್ಪತ್ತು ದಿನದ ನಂತರ ಯುವತಿಗೆ ಮತ್ತೆ ಜ್ವರ ಕಾಣಿಸಿಕೊಳ್ಳುತ್ತದೆ. ಜ್ವರದಿಂದ ನರಳುವಾಗ ಯುವತಿಯೊಂದು ಕನಸು ಕಾಣುತ್ತಾಳೆ. ಅದು ತನ್ನದೇ ಸ್ವಯಂವರದ ಕನಸು. ಪರ್ವತ ಶ್ರೇಣಿಗಳ ನಡುವಿರುವ ಸರೋವರದಲ್ಲಿ ಅತಿ ಎತ್ತರದ ಪರ್ವತದ ಮೇಲಿರುವ ರತ್ನಖಚಿತ ಸಿಂಹಾಸನದ ಚಿತ್ರ. ಅದರ ಮೇಲೆ ತಾನೇ ರಾಜಕುಮಾರಿಯಾಗಿ ಕುಳಿತು ನೋಡಿದರೆ; ಸರೋವರದ ತುಂಬಾ ಕೂದಲು ಇಳಿಬಿಟ್ಟ ಆಕೆಯ ಸುಂದರ ಪ್ರತಿಬಿಂಬ. ಈಕೆಗಾಗಿ ಕಾದುಕುಳಿತ ಸಾವಿರಾರು ಮಂದಿ ರಾಜಕುಮಾರರು. ಜ್ವರದ ತಾಪ ಇಳಿದ ಹಾಗೆ, ಕನಸು ಕೂಡ ಇನ್ನಿಲ್ಲವಾಗುತ್ತದೆ.

ಈ ಕನಸು ಯುವತಿಯನ್ನು ವಿವಾಹವಾಗಲು ಕಾದು ಕುಳಿತ ಯುವಕರ ಚಿತ್ರಣ ನೀಡುತ್ತದೆ. ವಿವಾಹದ ಅವಕಾಶ ಈಗ ಕೀಟ್ಸ್ ನೊಂದಿಗೂ ಇಲ್ಲ, ಹ್ಯಾಂಕ್ಸ್ ನೊಂದಿಗಂತು ಮೊದಲೇ ಇಲ್ಲ. ಲೈಂಗಿಕ ಕಾರ್ಯಕರ್ತೆಯಂತಾಗಿರುವ ಯುವತಿಯನ್ನು ವಿವಾಹವಾಗಲು ಖಂಡಿತ ಯಾವ ಸಾಮಾನ್ಯ ಯುವಕರು ಒಪ್ಪುವುದಿಲ್ಲ. ಎಲ್ಲ ಯುವತಿಯರಂತೆ ಸಹಜವಾದ; ಪತಿ ಮಕ್ಕಳೊಂದಿಗೆ ಕುಟುಂಬ ಜೀವನ ಕೂಡ, ಈಕೆಯ ಪಾಲಿಗೆ ಈಗ ದೂರವಾಗಿದೆ. ಇದೆಲ್ಲ ಸ್ವೇಚ್ಛಾಚಾರದ ಜೀವನದ ಪ್ರತಿಫಲವೇ ಆಗಿದೆ. ಆದರೆ ಲೈಂಗಿಕ ಕಾರ್ಯಕರ್ತೆಯಾಗಿ ಮುಂದುವರಿದರೆ ಇಂತಹ ಹತ್ತಾರು ಕೀಟ್ಸ್ ಮಹಾಶಯರು ಅವಳ ಬದುಕಿನಲ್ಲಿ ಬಂದು ಹೋಗುತ್ತಾರೆ. ಪ್ರೇಮವಿಲ್ಲದ ಕೇವಲ ಕಾಮ, ಬದುಕನ್ನು ಅರ್ಥಪೂರ್ಣಗೊಳಿಸಲಾರದು. ಇದು ಅರ್ಥವಾಗುವ ಮುನ್ನವೇ ಯುವತಿ ಸಾಕಷ್ಟು ದೂರ ಕ್ರಮಿಸಿದ್ದಾಳೆ. ಮತ್ತೊಮ್ಮೆ ಕೀಟ್ಸ್ ಡಾಕ್ಟರನ್ನು ಕರೆಸಿ, ಚಿಕಿತ್ಸೆ ಕೊಡಿಸುತ್ತಾನಾದರೂ; ಆಕೆ ಜ್ವರದಿಂದ ಪೂರ್ಣ ಗುಣಮುಖವಾಗಲು ಸಾಧ್ಯವಾಗುವುದಿಲ್ಲ. ವೈದ್ಯರು ಹೆಚ್ಚಿನ ಚಿಕಿತ್ಸೆಯ ಭಾಗವಾಗಿ ರಕ್ತ ಹಾಗೂ ಮೂತ್ರ ಪರೀಕ್ಷೆ ಮಾಡಿಸುತ್ತಾರೆ. ಆ ದಿನವೆ ಯುವತಿಯ ತಂದೆ ಭಾರತದಲ್ಲಿ ನಡೆದ ಚುನಾವಣೆಯಲ್ಲಿ ಗೆದ್ದು; ಮಂತ್ರಿಯಾಗಿ ನಾಲ್ಕನೇ ಅವಧಿಗೆ ಪ್ರಮಾಣವಚನ ಸ್ವೀಕರಿಸುತ್ತಾನೆ. ಈ ಸಂತೋಷದ ದೃಶ್ಯ ಕೂಡ ಆಕೆಯಲ್ಲಿ ಯಾವುದೇ ಪರಿಣಾಮ ಬೀರುವುದಿಲ್ಲ.

ಈಚೆಗೆ ಯುವತಿ ಆರೋಗ್ಯ ನಿಜಕ್ಕೂ ಗಂಭೀರವಾಗಿ ಕೆಟ್ಟಿತ್ತು. ರಕ್ತ ಹಾಗೂ ಮೂತ್ರ ಪರೀಕ್ಷೆಯ ಫಲಿತಾಂಶವನ್ನು; ವೈದ್ಯರು ಹೇಳಲೋ, ಬೇಡವೋ ಎಂಬ ಗೊಂದಲದಲ್ಲೇ ಹೇಳುತ್ತಾರೆ. ಅದರಂತೆ ಯುವತಿಯ ರಕ್ತದಲ್ಲಿ ಎಚ್.ಐ.ವಿ. ಪಾಸಿಟಿವ್ ಬೆಳವಣಿಗೆ ಆಗಿರುತ್ತದೆ. ಈ ಘಟನೆಯಿಂದ ಆಘಾತಕ್ಕೆ ಒಳಗಾದ ಯುವತಿ ಕೀಟ್ಸ್ ನನ್ನು ಮೋಸಗಾರನೆಂದು ಕರೆದು; ಕೊರಳಪಟ್ಟಿ ಹಿಡಿದು ಕೇಳುತ್ತಾಳೆ. ಇದಕ್ಕೆ ಉತ್ತರವಾಗಿ ಕೀಟ್ಸ್; ಉದ್ವೇಗ ರಹಿತನಾಗಿ ಹ್ಯಾಂಕ್ಸ್ ನ ಬ್ಲಡ್ ನಲ್ಲಿ ಎಚ್ಐವಿ ಪಾಸಿಟಿವ್ ಇತ್ತು ಎಂಬ ವಿಚಾರ ಪ್ರಕಟಿಸುತ್ತಾನೆ. ಆ ಕಾರಣಕ್ಕಾಗಿಯೇ ಎರಡು ವರ್ಷಗಳ ಕಾಲ ಅವನಿಗೆ ನಿನ್ನನ್ನು ಪರಿಚಯಿಸಿರಲಿಲ್ಲವೆನ್ನುತ್ತಾನೆ. ಎಚ್ಐವಿ ದೊಡ್ಡ ಕಾಯಿಲೆ ಏನು ಅಲ್ಲ, ಉತ್ತಮ ಚಿಕಿತ್ಸೆಯಿಂದ ನಿಯಂತ್ರಣದಲ್ಲಿಡಬಹುದು ಎಂದು ಉಚಿತ ಸಲಹೆ ಕೊಡುತ್ತಾನೆ. ಎಚ್ಐವಿ ಕಾಣಿಸಿಕೊಂಡ ನಂತರವೂ ತುಂಬಾ ವರ್ಷಗಳು ಸಂತೋಷದಿಂದ ಬದುಕು ಸಾಗಿಸಬಹುದೆನ್ನುತ್ತಾನೆ. ಈ ಘಟನೆ ನಡೆದು ತಿಂಗಳಾಗಿದೆ; ಕೀಟ್ಸ್ ಯುವತಿಗೆ, ತನ್ನ ಮನೆಯ ಆಹ್ವಾನ ನಿರಾಕರಿಸುತ್ತಾನೆ.

ಎದುರು ಸಿಕ್ಕಾಗ ಮಾತ್ರ ಹಲೋ ಎಂದು ನಗುತ್ತ ವಿಶ್ ಮಾಡಿ ನಿರ್ಗಮಿಸುತ್ತಾನೆ. ಎಂಟು ದಿನಗಳ ಹಿಂದೆ ಕ್ರಿಸ್ಮಸ್ ಆಚರಣೆಗೆ ಊರಿಗೆ ಹೋದ ಕೀಟ್ಸ್ ಇನ್ನೂ ಹಿಂತಿರುಗಿಲ್ಲ. ಈ ಕೊನೆಯ ವಿವರಗಳಗಳೊಂದಿಗೆ ಯುವತಿ, ತಾಯಿಗೆ ಬರೆದ ಪತ್ರ ಮುಕ್ತಾಯಗೊಳ್ಳುತ್ತದೆ. ದಯವಿಟ್ಟು ಅಪ್ಪನಿಗೆ ಈ ಪತ್ರ ಸಿಗುವಂತೆ ಮಾಡಬೇಡ ಎಂಬುದು ಆಕೆಯ ಅಂತಿಮ ನುಡಿ.

ಇಡಿಯಾಗಿ ಕಥೆ ಗಂಡು ಹೆಣ್ಣಿನ ಸಮ್ಮಿಲನದ ನಂತರದ ಪರಿಣಾಮಗಳನ್ನು ಕುರಿತು ಸಮಾಜದ ಗಮನಸೆಳೆಯುತ್ತದೆ. ಇಲ್ಲಿನ ವೈದ್ಯ ವಿದ್ಯಾರ್ಥಿಗಳು ಬಹಳ ಬೇಗ ದೈಹಿಕ ಸಂಪರ್ಕಕ್ಕೆ ತೆರೆದು ಕೊಂಡಿದ್ದಾರೆ ಎನ್ನುವುದು ವಾಸ್ತವ. ಆದರೆ ಅವರಿಗೆ ಬದುಕಿನ ಹಾಗೂ ಆರೋಗ್ಯದ ಸುರಕ್ಷತೆಯ ಬಗ್ಗೆ ಅರಿವಿಲ್ಲ ಎನ್ನುವುದು ಕಳವಳ ಉಂಟುಮಾಡುವ ಸಂಗತಿ. ಇದಕ್ಕೆ ಬಹಳ ಮುಖ್ಯ ವಾಗಿ; ಜಾಗತೀಕವಾಗಿ ಮಾನವ ಪ್ರೌಢಾವಸ್ಥೆಗೆ ತಲುಪುವ ವಯೋಮಾನ ಹಿಂದಿಗಿಂತ: ಇಂದು ತಗ್ಗಿರುವುದು ಒಂದು ಕಾರಣವಾದರೆ, ಅಷ್ಟೇ ಬೇಗ ಮಾನಸಿಕ ದೈಹಿಕ ಬಯಕೆಗಳು ಒಡಮೂಡಲಾರಂಭಿಸುತ್ತಿವೆ. ಈ ಸಂದಿಗ್ಧತೆಯನ್ನು ನಿವಾರಿಸಿಕೊಳ್ಳುವ ಸ್ವಯಂ ತಿಳಿವಳಿಕೆ ಯುವ ಜನತೆಗಿಲ್ಲ.

ಭಾವನೆಗಳನ್ನು, ಕಾಮನೆಗಳನ್ನು ಹೇಗೆ ನಿಗ್ರಹಿಸಬೇಕು, ಹೇಗೆ ನಿರ್ವಹಿಸಬೇಕು ಎಂದು ಚರ್ಚಿಸುವ ಅವಕಾಶಗಳು ಇಂದು ಕುಟುಂಬಗಳಲ್ಲೂ ಇಲ್ಲ; ಶಾಲಾ-ಕಾಲೇಜುಗಳಲ್ಲೂ ಇಲ್ಲ. ಆದ್ದರಿಂದ ಹಿಂದಿನಿಂದಲೂ ಚಾಲ್ತಿಯಲ್ಲಿರುವ ಪುರುಷ ನಿರ್ಮಿತ ಲೈಂಗಿಕ ದೌರ್ಜನ್ಯದ ಭಾಗವಾಗಿ ಶೋಷಣೆ ಮಾಡಲು, ಗಂಡು ಮಕ್ಕಳು ಮುಂದಾಗುತ್ತಾರೆ. ಇನ್ನೂ, ಹೆಣ್ಣು ಮಕ್ಕಳು ತಮಗೆ ತಿಳಿದಂತೆ; ತಮ್ಮ ಮನಸ್ಸಿನ, ದೇಹದ, ಬಯಕೆಗಳಿಗೆ ಪ್ರತಿಸ್ಪಂದಿಸುತ್ತಿದ್ದಾರೆ. ಹೀಗಾಗಿ ಅಕಾಲಿಕ ಗರ್ಭಧಾರಣೆ, ಅಸುರಕ್ಷಿತ ಗರ್ಭಪಾತಗಳು, ಭೀಕರವಾದ ಎಚ್ಐವಿ ಕಾಯಿಲೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕೀಟ್ಸ್ ನಂತವರ ದೃಷ್ಟಿಯಲ್ಲಿ ಸಮಾಜ ಯಾವುದನ್ನು ಅಕ್ಷಮ್ಯ, ಅನೈತಿಕ ಎನ್ನುತ್ತದೋ; ಅದನ್ನು ಕೇವಲ ಲೈಂಗಿಕ ಸಂಪರ್ಕದ ಒತ್ತಡ ಎಂದು ಬಿಂಬಿಸುವುದೇ ಆಗುತ್ತಿದೆ.

ಎರಡು ದೇಹಗಳು ಒಂದಾಗುವುದು, ಅಲ್ಲೇ ಆರಂಭವಾಗಿ ಅಲ್ಲೇ ಕೊನೆಗೊಳ್ಳುವ ವ್ಯವಹಾರವಲ್ಲ; ಅಲ್ಲಿಂದ ಆರಂಭವಾಗಿ ಜೀವನದ ಎಲ್ಲಾ ಪದರಗಳಿಗೂ ಚಾಚಿಕೊಳ್ಳುವ ಕಾಳಜಿ ಆಗಿರುತ್ತದೆ. ಇಲ್ಲಿ ಹದಿಹರೆಯದ ಯುವ ಜನತೆ ನೈಸರ್ಗಿಕ ಅಗತ್ಯಗಳನ್ನು ಮತ್ತು ಆ ಕ್ರಿಯೆಯಿಂದ ಎದುರಾಗಬಹುದಾದ ಪರಿಣಾಮಗಳನ್ನು; ಅರ್ಥ ಮಾಡಿಕೊಳ್ಳಲು ಅಸಮರ್ಥರಾಗಿರುವುದನ್ನು ಕಥೆಯಲ್ಲಿ ಕಾಣಬಹುದು. ಒಂದು ದೇಶದ ಜನರ ಆರೋಗ್ಯ ಕಾಪಾಡಬೇಕಾದ ಜವಾಬ್ದಾರಿ ಇರುವ; ವೈದ್ಯ ವಿದ್ಯಾರ್ಥಿಗಳೇ ಅನಾರೋಗ್ಯ ಪೀಡಿತರಾಗಿರುವುದು, ಒಳ್ಳೆಯ ಬೆಳವಣಿಗೆಯಲ್ಲ. ಲೈಂಗಿಕ ಸಂಬಂಧ ಈ ಇಬ್ಬರು ಗಂಡು ಹೆಣ್ಣುಗಳ ನಡುವೆ ಯುವತಿಯಲ್ಲಿ ಭಾವನಾತ್ಮಕ ಹಾಗೂ ದೈಹಿಕ ಅವಲಂಬನೆಯನ್ನು ಬೆಳೆಸಿದರೆ; ಕೀಟ್ಸ್ ಹಾಗೂ ಹ್ಯಾಂಕ್ಸ್ ರಲ್ಲಿ ದೈಹಿಕ ಅವಲಂಬನೆ ಮಾತ್ರ ಬೆಳೆಸಿದೆ. ಆದ್ದರಿಂದ ಈ ದೈಹಿಕ ಅವಲಂಬನೆ ಪುರುಷ ನಿರ್ಮಿತ ಶೋಷಣೆಯ ಅಸ್ತ್ರ ಎಂದು ಗುರುತಿಸಬಹುದು.

ಯುವತಿ ಲೈಂಗಿಕ ಕ್ರಿಯೆಯ ನಂತರ ಮನೋ ಕ್ಷೋಭೆಗೆ ಗುರಿಯಾಗುತ್ತಾಳೆ. ಆದರೆ ಕೀಟ್ಸ್ ಹಾಗೂ ಹ್ಯಾಂಕ್ಸ್ ಸರಲ್ಲಿ ಈ ಸಮಸ್ಯೆ ಕಾಣಿಸುವುದಿಲ್ಲ. ಇವರಿಬ್ಬರಿಗೂ ಯುವತಿಯನ್ನು ಭೋಗಿಸುವುದಷ್ಟೇ ಮುಖ್ಯವಾಗುತ್ತದೆ. ಇಂತಹ ದುಷ್ಟ ಯುವಕರಿಂದ, ಕುಟುಂಬ ವ್ಯವಸ್ಥೆ ಹಾಗೂ ಸಾಮಾಜಿಕ ಸ್ವಾಸ್ಥ್ಯ ಕೆಡುತ್ತದೆ. ಇವರದು ಸಮ್ಮತಿಯ ಲೈಂಗಿಕ ಸಂಬಂಧವೇ ಆದರೂ, ಅದರಲ್ಲಿ ಪಾವಿತ್ರ್ಯತೆ ಹಾಗೂ ಆರೋಗ್ಯ ಎರಡು ಅಪಾಯಕ್ಕೆ ಸಿಲುಕುತ್ತಿರುವುದನ್ನು ಗುರುತಿಸಬಹುದು. ಹೀಗಾಗಿ ಸಮ್ಮತಿಯ ಲೈಂಗಿಕ ವಯೋಮಾನವನ್ನು ನಿರ್ಧರಿಸುವುದಕ್ಕಿಂತ ಮುಖ್ಯವಾಗಿ, ನೈತಿಕ ಮಾನವೀಯ ಶಿಕ್ಷಣದ ಜತೆಗೆ ಮುಖ್ಯವಾಗಿ; ಲೈಂಗಿಕ ಶಿಕ್ಷಣದ ಅರಿವನ್ನು ಮೂಡಿಸಬೇಕಾದ ತುರ್ತು ಅಗತ್ಯವಿದೆ.

## ಕೊನೆ ಟಿಪ್ಪಣಿಗಳು

1. ಪುಟ - 500: ಹಂದ್ರಾಳರ ಕಥಾ ಜಗತ್ತು, ಸಂಪುಟ - 2
2. ಪುಟ - 505: ಹಂದ್ರಾಳರ ಕಥಾ ಜಗತ್ತು, ಸಂಪುಟ - 2

## ಪರಾಮರ್ಶನ ಗ್ರಂಥಗಳು


1. ಹಂದ್ರಾಳರ ಕಥಾ ಜಗತ್ತು, ಸಂಪುಟ - 2, ಸಿವಿಜಿ ಪ್ರಕಾಶನ: 2017
2. ಅಣು ಕಾದಂಬರಿ - ಕೇಶವರೆಡ್ಡಿ ಹಂದ್ರಾಳ, ಸಪ್ನ ಬುಕ್ ಹೌಸ್: 2019
3. ಸಿಮೊನ್ ದ ಬೊವಾ ದ ಸೆಕೆಂಡ್ ಸೆಕ್ಸ್ ಅನು: ಎಚ್.ಎಸ್.ಶ್ರೀಮತಿ, ಬರಹ ಪಬ್ಲಿಷಿಂಗ್ ಹೌಸ್: 2011